ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181 ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ :ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ವಿವಾದಾತ್ಮಕ ಕೋಲ್ಕತ್ತಾ ಹೈಕೋರ್ಟ್ ನ್ಯಾಯಮೂರ್ತಿ ಕರ್ಣನ್ ನಿವೃತ್ತಿ

ನ್ಯಾಯಾಂಗ ನಿಂದನೆ ಆರೋಪದಡಿ ಸುಪ್ರೀಂ ಕೋರ್ಟ್‌ನಿಂದ ಆರು ತಿಂಗಳು ಜೈಲು ಶಿಕ್ಷೆಗೆ ಗುರಿಯಾಗಿ ತಲೆ ಮರೆಸಿಕೊಂಡಿರುವ ಕೋಲ್ಕತಾ ಹೈಕೋರ್ಟ್ ನ್ಯಾಯಮೂರ್ತಿ ಸಿ.ಎಸ್. ಕರ್ಣನ್ ಅವರು ಸೋಮವಾರ ಸೇವೆಯಿಂದ ನಿವೃತ್ತಿಯಾಗಿದ್ದಾರೆ. 62 ವರ್ಷದ ನ್ಯಾ.ಕರ್ಣನ್ ಅವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಹಿನ್ನೆಲೆಯಲ್ಲಿ ಕೋಲ್ಕತ್ತಾ ಹೈಕೋರ್ಟ್ ಆಡಳಿತ ಮಂಡಳಿ ಸೋಮವಾರ ನಡೆಯಬೇಕಿದ್ದ ಅವರ ಬೀಳ್ಕೊಡುಗೆ ಕಾರ್ಯಕ್ರಮವನ್ನು ರದ್ದುಗೊಳಿಸಿದೆ.

ಸಚಿನ್, ಸೌರವ್ ದಾಖಲೆ ಹಿಂದಿಕ್ಕಿದ ಶಿಖರ್ ಧವನ್

ಅತ್ಯುತ್ತಮ ಫಾರ್ಮ್‌ನಲ್ಲಿರುವ ಭಾರತ ಕ್ರಿಕೆಟ್ ತಂಡದ ಆರಂಭಿಕ ಆಟಗಾರ ಶಿಖರ್ ಧವನ್ ವೇಗದ ಸಾವಿರ ರನ್ ಪೂರೈಸಿದ ಭಾರತೀಯ ಆಟಗಾರ ಎಂಬ ದಾಖಲೆ ನಿರ್ಮಿಸಿದ್ದಾರೆ. ಪ್ರಸಕ್ತ ಸಾಲಿನಲ್ಲಿ ಧವನ್ ಆಡಿರುವ 16 ಇನಿಂಗ್ಸ್‌ನಲ್ಲಿ 1000 ರನ್ ಗಳಿಸುವ ಮೂಲಕ ವೇಗದ ಸಾವಿರ ರನ್ ಗಳಿಕೆ ಮಾಡಿದ ಭಾರತೀಯ ಆಟಗಾರರ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಈ ಹಿಂದೆ ತೆಂಡೂಲ್ಕರ್ 18 ಇನ್ನಿಂಗ್ಸ್‌ಗಳಲ್ಲಿ 1000 ರನ್ ಗಳಿಸಿದ್ದರೆ, ಸೌರವ್ ಗಂಗೂಲಿ 20 ಇನ್ನಿಂಗ್ಸ್‌ನಲ್ಲಿ 1000 ರನ್ ಪೂರೈಸಿದ್ದರು.

ಪಾರ್ವತಮ್ಮ ರಾಜ್‌ಕುಮಾರ್ ಮನೆಗೆ ರಾಹುಲ್ ಗಾಂಧಿ ಭೇಟಿ : ಸಾಂತ್ವನ

ವರನಟ ಡಾ.ರಾಜಕುಮಾರ್ ಅವರ ಧರ್ಮಪತ್ನಿ ಪಾರ್ವತಮ್ಮ ರಾಜಕುಮಾರ್ ನಿಧನದ ಹಿನ್ನೆಲೆಯಲ್ಲಿ ಪಾರ್ವತಮ್ಮ ನಿವಾಸಕ್ಕೆ ಸೋಮವಾರ ಆಗಮಿಸಿದ್ದ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಕಾರ್ಯಕ್ರಮ ಮುಗಿಸಿದ ಬಳಿಕ ರಾಜಕುಮಾರ್ ಅವರ ಸದಾಶಿವನಗರ ನಿವಾಸಕ್ಕೆ ತೆರಳಿದ ಅವರು ರಾಜ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 40 ಸಂಚಿಕೆ :216 ಮಂಗಳವಾರ ಜೂ.13, 2017 ದೂರವಾಣಿ : 268494 ಪುಟ-4 ರೂ.2-00 NO. HSN-761/ 2015-17

ಅಭ್ಯರ್ಥಿ ಆಯ್ಕೆ ಸಮಾಲೋಚನೆಗೆ 3 ಸಚಿವರ ಸಮಿತಿ ರಚಿಸಿದ ಅಮಿತ್ ಷಾ

ನವದೆಹಲಿ: ರಾಷ್ಟ್ರಪತಿ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪಕ್ಷದ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಬಗ್ಗೆ ಸಮಾಲೋಚನೆ ನಡೆಸಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಅವರು ಮೂವರು ಸಚಿವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಿದ್ದಾರೆ.

ಗೃಹ ಸಚಿವ ರಾಜನಾಥ್ ಸಿಂಗ್, ಹಣಕಾಸು ಸಚಿವ ಅರುಣ್ ಜೇಟ್ಲಿ , ಮಾಹಿತಿ ಮತ್ತು ಪ್ರಸಾರ ಖಾತೆಯ ಸಚಿವ ವೆಂಕಯ್ಯ ನಾಯ್ಡು ಅವರು ಸಮಿತಿಯ ಸದಸ್ಯರಾಗಿದ್ದಾರೆ. ಅಭ್ಯರ್ಥಿಯ ಆಯ್ಕೆಗೆ ಸಂಬಂಧಿಸಿ ಇತರ ರಾಜಕೀಯ ಪಕ್ಷಗಳು ಮತ್ತು ಮಿತ್ರ ಪಕ್ಷಗಳ ಜತೆ ಸಮಾಲೋಚನೆ ನಡೆಸುವ ಹೊಣೆಗಾರಿಕೆಯನ್ನು ಸಮಿತಿಗೆ ವಹಿಸಲಾಗಿದೆ.

(-4ನೇ ಪುಟಕ್ಕೆ)

ಬಂದ್‌ಗೆ ನೀರಸ ಪ್ರತಿಕ್ರಿಯೆ

ಹಾಸನ : ಬಯಲು ಸೀಮೆಗೆ ಶಾಶ್ವತ ನೀರಾವರಿ, ಮಹದಾಯಿ-ಕಳಸಾ ಬಂಡೂರಿ ಯೋಜನೆಯ ತ್ವರಿತ ಜಾರಿ, ಮೇಕೆದಾಟು ಯೋಜನೆ ಜಾರಿ, ರೈತರ ಸಾಲ ಮನ್ನಾ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ವಿವಿಧ ಕನ್ನಡಪರ ಸಂಘಟನೆಗಳು ಸೋಮವಾರ ಕರೆ ನೀಡಿದ್ದ ಬಂದ್‌ಗೆ ಜಿಲ್ಲೆಯಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ಸೋಮವಾರ ಬೆಳಿಗ್ಗೆ ನಗರ ಸೇರಿದಂತೆ ಜಿಲ್ಲಾದ್ಯಂತ ವ್ಯಾಪಾರ ವಹಿವಾಟು ಎಂದಿನಂದಿತ್ತು. ಅಂಗಡಿ ಮುಂಗಟ್ಟುಗಳು ತೆರೆದಿದ್ದವು. ಶಾಲಾ-ಕಾಲೇಜಿಗೆ ರಜೆ ಇರಲಿಲ್ಲ.

11 ಗಂಟೆ ವೇಳೆಯಲ್ಲಿ ಹಳೇ ಬಸ್ ನಿಲ್ದಾಣ ರಸ್ತೆಯಲ್ಲಿರುವ ಅಂಗಡಿ ಮುಂಗಟ್ಟುಗಳನ್ನು ಕನ್ನಡಪರ ಸಂಘಟನೆಗಳು ಮುಚ್ಚಿಸಿದವು. ಆದರೆ ಮತ್ತೆ ಪುನಃ ವಹಿವಾಟು ಮುಂದುವರೆಯಿತು. ರಸ್ತೆ ಸಾರಿಗೆ ಬಸ್ ಸಂಚಾರ ಸುಗಮವಾಗಿತ್ತು. ಆಟೋ, ಮ್ಯಾಕ್ಸಿಕ್ಯಾಬ್‌ಗಳ ಸಂಚಾರ ಎಂದಿನಂದಿತ್ತು.

ಹೇಮಾವತಿ ಪ್ರತಿಮೆ ಎದುರು ವಿವಿಧ ಕನ್ನಡಪರ ಸಂಘಟನೆಗಳು ಜಮಾಯಿಸಿದ್ದವು. ನಂತರ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಯಿತು. ಬೆಳಗಿನ ಸಿನಿಮಾ ಪ್ರದರ್ಶನ ಇರಲಿಲ್ಲ. ಕೆಲವು ಹೋಟೆಲ್‌ಗಳು ಮಾತ್ರ ಬಂದ್ ಆಗಿದ್ದವು. ಶಾಲಾ-ಕಾಲೇಜು, ಬ್ಯಾಂಕ್ ವಹಿವಾಟುಗಳು ಎಂದಿನಂತೆ ನಡೆದವು. ಒಟ್ಟಾರೆ ಈ ಬಂದ್ ಸಂಪೂರ್ಣ ವಿಫಲವಾಯಿತು.

(-4ನೇ ಪುಟಕ್ಕೆ)

ಬಂದ್ ಹಿನ್ನೆಲೆಯಲ್ಲಿ ನಗರದಲ್ಲಿ ವಿವಿಧ ಸಂಘಟನೆಗಳ ಪ್ರತಿಭಟನೆ

- ಎಂದಿನಂತೆ ನಡೆದ ವಹಿವಾಟು
- ಶಾಲಾ-ಕಾಲೇಜುಗಳಿಗೆ ರಜೆ ಇಲ್ಲ
- ಬಾಗಿಲು ತೆರೆದಿದ್ದ ಅಂಗಡಿ ಮುಂಗಟ್ಟುಗಳು
- ಬೆಳಗಿನ ಚಿತ್ರ ಪ್ರದರ್ಶನ ಇರಲಿಲ್ಲ
- ರೈತ ಸಂಘ, ಕನ್ನಡಪರ ಸಂಘಟನೆಗಳಿಂದ ಮೆರವಣಿಗೆ
- ತಾಲ್ಲೂಕು ಕೇಂದ್ರಗಳಲ್ಲಿಯೂ ಬಂದ್‌ಗೆ ಬೆಂಬಲವಿಲ್ಲ
- ಸಾರಿಗೆ ಬಸ್, ಆಟೋ, ಮ್ಯಾಕ್ಸಿಕ್ಯಾಬ್ ಎಂದಿನಂತೆ ಸಂಚಾರ

ಸಿನಿಮೀಯ ರೀತಿಯಲ್ಲಿ ವಿದ್ಯಾರ್ಥಿನಿ ಅಪಹರಣ

ಹೊಳೆನರಸೀಪುರ ತಾಲ್ಲೂಕು ಪಡುವಲಹಿಪ್ಪೆಯಲ್ಲಿ ಘಟನೆ

ಹೊಳೆನರಸೀಪುರ : ಇಲ್ಲಿನ ಹೆಚ್.ಡಿ.ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳನ್ನು ಸೋಮವಾರ ಮಧ್ಯಾಹ್ನ ಚಾಕು-ಚೂರಿ ತೋರಿಸಿ ಕಾರಿನಲ್ಲಿ ಅಪಹರಿಸಿಕೊಂಡು ಹೋಗಿರುವ ಪ್ರಕರಣ ಪಡುವಲಹಿಪ್ಪೆ ಗ್ರಾಮದಲ್ಲಿ ಸಿನಿಮೀಯ ಶೈಲಿಯಲ್ಲಿ ನಡೆದಿದೆ.

ಕಳೆದ ಒಂದು ಒಂದು ವಾರದಿಂದ ನಡೆಯುತ್ತಿರುವ ಪರೀಕ್ಷೆ ಹಿನ್ನೆಲೆಯಲ್ಲಿ ಸೋಮವಾರ ಬೆಳಿಗ್ಗೆ ಬಂದು ಪರೀಕ್ಷೆ ಬರೆದ ಪ್ರಥಮ ಎಂ.ಕಾಂ ವಿದ್ಯಾರ್ಥಿನಿಯು ಮಧ್ಯಾಹ್ನ 1 ಗಂಟೆ ವೇಳೆಯಲ್ಲಿ ಕಾಲೇಜು ಆವರಣದ ಗೇಟ್ ಬಳಿ ಬಂದಾಗ, ಆಕೆಯನ್ನು ಹೆದರಿಸಿ ಕಾರಿನಲ್ಲಿ ಅಪಹರಿಸಲಾಗಿದೆ. ಬಿಳಿ ಬಣ್ಣದ ಸ್ವಿಫ್ಟ್ ಕಾರಿನಲ್ಲಿ ಬಂದಿದ್ದ ಯುವಕ ತಲೆಗೆ ಮಂಕಿ ಕ್ಯಾಪ್ ಧರಿಸಿದ್ದು, ವಿದ್ಯಾರ್ಥಿನಿಗೆ ಚಾಕು-ಚೂರಿ ತೋರಿಸಿ ಬೆದರಿಸಿ ಅಪಹರಿಸಿಕೊಂಡು ಹೋದನೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಈ ವಿದ್ಯಾರ್ಥಿನಿಯು ಪಡುವಲಹಿಪ್ಪೆಯಲ್ಲಿರುವ ಬಿ.ಸಿ.ಎಂ. ವಿದ್ಯಾರ್ಥಿ ನಿಲಯದಲ್ಲಿದ್ದುಕೊಂಡು ಕಾಲೇಜಿಗೆ ಹೋಗುತ್ತಿದ್ದಳೆಂದು, ರಜಾ ದಿನವಾದ್ದರಿಂದ ಕಳೆದ ಒಂದು ವಾರದಿಂದ ಕೆ.ಆರ್.ನಗರ ತಾಲ್ಲೂಕಿನ ತನ್ನ ಹುಟ್ಟೂರಾದ ಸಾಲಿಗ್ರಾಮದಿಂದ ಬಂದು ಪರೀಕ್ಷೆ ಬರೆದು ಹೋಗುತ್ತಿದ್ದಳೆಂದು ತಿಳಿಸಲಾಗಿದೆ.

ಈ ಬಗ್ಗೆ ವಿದ್ಯಾರ್ಥಿನಿಯ ಪೋಷಕರು ಇಲ್ಲಿನ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಅಪಹರಣಕಾರರನ್ನು ಹುಡುಕಲು ಪೊಲೀಸರು ಎಲ್ಲಾ ಸಿದ್ಧತೆ ನಡೆಸಿದ್ದಾರೆ ಎನ್ನಲಾಗಿದೆ.

ಹಿನ್ನೆಲೆ : ಸಾಲಿಗ್ರಾಮದ ನಿವಾಸಿ ಮೋಹನ್ ಎಂಬ ಯುವಕ ಅದೇ ಗ್ರಾಮದ ಇದೇ ಅಪಹರಿಸಲ್ಪಟ್ಟಿರುವ ವಿದ್ಯಾರ್ಥಿನಿಯನ್ನು ತನಗೆ ಮದುವೆ ಮಾಡಿಕೊಡುವಂತೆ ಕೇಳಿಕೊಂಡಿದ್ದ. ಕಳೆದ 6 ತಿಂಗಳ ಹಿಂದೆ ತನ್ನ ನಾಲ್ಕೈದು ಸ್ನೇಹಿತರನ್ನು ಆಕೆಯ ಮನೆಗೆ ಕಳುಹಿಸಿ, ಪೋಷಕರ ಒಪ್ಪಿಗೆಗೆ ಪ್ರಯತ್ನಿಸಿದನೆಂದೂ, ವಿದ್ಯಾಭ್ಯಾಸ ಮುಗಿಯದೆ ಮದುವೆ ಸಾಧ್ಯವಿಲ್ಲವೆಂದು ತಿಳಿಸಿ ಪೋಷಕರು ನಿರಾಕರಿಸಿದರೆನ್ನಲಾಗಿದೆ.

ಅಪಹರಣಕಾರರನ್ನು ಹಿಡಿಯಲು ಪೊಲೀಸರು ಶೋಧ ಮುಂದುವರಿಸಿದ್ದಾರೆ.

‘ಆರೋಪ ಸಾಬೀತಾದರೆ ಸಾರ್ವಜನಿಕವಾಗಿ ಕ್ಷಮೆ’

ಹಾಸನ: ಕಾಸ್ಮೋಪಾಲಿಟನ್ ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಅಸೋಸಿಯೇಷನ್‌ನಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಸ್ಪಷ್ಟಪಡಿಸಿರುವ ಅಸೋಸಿಯೇಷನ್‌ನ ಅಧ್ಯಕ್ಷ ಹಿಮವಂತಗೋಪಾಲ್, ಆರೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ತಪ್ಪಿತಸ್ಥನಾದರೆ ಸಾರ್ವಜನಿಕವಾಗಿ ಕ್ಷಮೆ ಕೇಳುತ್ತೇನೆ ಎಂದು ಹೇಳಿದರು.

ಮಾಧ್ಯಮ ಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಈ ಸಂಬಂಧ ಅಸೋಸಿಯೇಷನ್‌ನ ಸಂಸ್ಥಾಪಕ ಸದಸ್ಯ ಪುಟ್ಟರಾಜೇಗೌಡ ಅವರು ತಮ್ಮ ವಿರುದ್ಧ ಮಾಡಿರುವ ಆರೋಪದಲ್ಲಿ ಹುರುಳಿಲ್ಲ. ವೈಯಕ್ತಿಕ ತೇಜೋವಧೆಗಾಗಿ ಪ್ರಯತ್ನ ನಡೆಸಿದ್ದಾರೆ ಎಂದು ಹೇಳಿದರು.

ತನ್ನೊಬ್ಬನನ್ನೇ ಗುರಿಯಾಗಿಸಿ ಆರೋಪಿಸಿರುವುದು ಸರಿಯಲ್ಲ. ಪ್ರತಿಯೊಂದು ವಿಷಯಗಳ ಬಗ್ಗೆ ಆಡಳಿತ ಸಮಿತಿ ನಿರ್ಣಯ ಕೈಗೊಂಡ ನಂತರವೇ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಕಾರ್ಯಾನುಷ್ಠಾನಗೊಳಿಸುತ್ತಾರೆ. ಇದು ನಿಯಮಬದ್ಧವಾಗಿದೆ ಎಂದರು.

ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡಿಲ್ಲ. ಅದೆಲ್ಲಾ ಆಧಾರರಹಿತವಾದುದು. ಆಡಳಿತ ಸಮಿತಿಯಲ್ಲಿ ಅಧಿಕಾರ ದುರುಪಯೋಗವೂ ಆಗಿಲ್ಲ, ಹಣ ದುರ್ಬಳಕೆಯೂ ನಡೆದಿಲ್ಲ. ಅಸೋಸಿಯೇಷನ್‌ಗೆ ಸಂಬಂಧಿಸಿದಂತೆ ಸಹಕಾರ ಇಲಾಖೆಯಲ್ಲಿ ತನಿಖೆ ನಡೆದಿದೆ. ಆ ವರದಿ ತಡೆ ಹಿಡಿಯಲಾಗಿದೆ ಎಂಬುದು ಸುಳ್ಳು ಎಂದರು.

(-4ನೇ ಪುಟಕ್ಕೆ)

> “ನನ್ನ ವಿರುದ್ಧ ಅನಗತ್ಯ ಆರೋಪ ಕೇಳಿ ಬರುತ್ತಿದೆ. ಹಾಗಾಗಿ ಅಧ್ಯಕ್ಷನಾಗಿ ಇರಬೇಕೆಂಬ ಬಗ್ಗೆ ಪ್ರಶ್ನೆಯೂ ಇದೆ. ಇಂತಹ ಗೊಂದಲ ವಾತಾವರಣವಿದ್ದರೆ ಕೆಲಸ ಮಾಡಲು ಸಾಧ್ಯವಿಲ್ಲ.
>
> *-ಹಿಮವಂತ ಗೋಪಾಲ್,*
> *ಕಾಸ್ಮೋಪಾಲಿಟನ್ ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಅಸೋಸಿಯೇಷನ್‌ ಅಧ್ಯಕ್ಷ*

ಐಐಟಿ ಪ್ರವೇಶ ಪರೀಕ್ಷೆ: ಚೇತನ್‌ಗೆ 715ನೇ ರ್‍ಯಾಂಕ್



ಹಾಸನ : ಇತ್ತೀಚೆಗೆ ನಡೆದ ಐಐಟಿ ಪ್ರವೇಶ ಪರೀಕ್ಷೆಯಲ್ಲಿ ಜಿಲ್ಲೆಯ ಎ.ಆರ್. ಚೇತನ್ 715ನೇ ರ್‍ಯಾಂಕ್ ಪಡೆಯುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾನೆ. ಜೆ.ಇ.ಇ. ಮುಖ್ಯ ಪರೀಕ್ಷೆಯಲ್ಲಿ 255 ಅಂಕ ಪಡೆದಿದ್ದಾನೆ. ಚೇತನ್ ತಾಲ್ಲೂಕಿನ ಅಗಿಲೆ ಗ್ರಾಮದ ಟಿ.ರಾಮಕೃಷ್ಣ ಹಾಗೂ ಮಂಜುಳಾ ದಂಪತಿ ಪುತ್ರ.

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಹಕರಿಸಲು ಕರೆ

ಹಾಸನ: ಸಾಮಾಜಿಕ ಪಿಡುಗಾದ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪ್ರತಿಯೊಬ್ಬ ನಾಗರಿಕರು ಕೈಜೋಡಿಸುವ ಮೂಲಕ ದೇಶದ ಸಮಗ್ರ, ಸಮತೋಲನ ಬೆಳವಣಿಗೆಗೆ ಸಹಕರಿಸುವಂತೆ ಜಿಲ್ಲಾಧಿಕಾರಿ ವಿ.ಚೈತ್ರ ತಿಳಿಸಿದ್ದಾರೆ.

ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಹಾಸನ ಇವರ ಸಹಯೋಗದಲ್ಲಿ ಸೋಮವಾರ ನಗರದ ಅಂಬೇಡ್ಕರ್ ಭವನದಲ್ಲಿ ಏರ್ಪಡಿಸಲಾಗಿದ್ದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದು, ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಬಿಸಿಯೂಟ, ಕುಡಿಯಲು ಹಾಲು ನೀಡುವುದರ ಜೊತೆಗೆ ಮಕ್ಕಳ ಶಿಕ್ಷಣ ಹಕ್ಕು ಕೂಡ ಜಾರಿಗೆ ತಂದಿದೆ. ಆದಾಗ್ಯೂ ಬಾಲ ಕಾರ್ಮಿಕ ಪದ್ಧತಿ ಜೀವಂತವಾಗಿದೆ. ಈ ಅನಿಷ್ಟ ಪದ್ಧತಿಯ ನಿರ್ಮೂಲನೆಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಿ ಮುಂದಿನ ಭವಿಷ್ಯಕ್ಕೆ ನಾಂದಿ ಆಗಬೇಕು ಎಂದರು.

ಈ ನಿಟ್ಟಿನಲ್ಲಿ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕುರಿತಂತೆ ಚಿತ್ರಕಲೆ, ಪ್ರಬಂಧ ಹಾಗೂ ಭಾಷಣ ಸ್ಪರ್ದೆಗಳನ್ನು ಶಾಲಾ- ಕಾಲೇಜು ಮಕ್ಕಳಿಗೆ ಏರ್ಪಡಿಸಲು ನಿರ್ದೇಶನ ನೀಡಿರುವುದಾಗಿ ತಿಳಿಸಿದರು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮಕ್ಕಳು ಸಮಾಜಕ್ಕೆ ಸಂದೇಶ ಸಾರುವ ಮೂಲಕ ಜಿಲ್ಲೆಯಲ್ಲಿ ಬಾಲ ಕಾರ್ಮಿಕ ಪದ್ಧತಿ ತಡೆಗಟ್ಟಲು ಕೈಜೋಡಿಸುವಂತೆ ತಿಳಿಸಿದ ಜಿಲ್ಲಾಧಿಕಾರಿಗಳು, ಮಳೆಗಾಲದಲ್ಲಿ ಸಾಮಾನ್ಯವಾಗಿ ಬರುವ ರೋಗ ರುಜಿನಗಳನ್ನು ತಡೆಗಟ್ಟಲು ಮುಂಜಾಗ್ರತೆ ವಹಿಸಬೇಕು ಎಂದರು.

ಜಿಲ್ಲೆಯಲ್ಲಿ ಈ ಬಾರಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ ಫಲಿತಾಂಶ ನಮ್ಮನ್ನೆಲ್ಲಾ ತಲೆ ತಗ್ಗಿಸುವಂತೆ ಮಾಡಿದೆ. ಶಿಕ್ಷಕ ವೃಂದದವರು ಇದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ಈ ಬಾರಿ ಗುಣಾತ್ಮಕ ಶಿಕ್ಷಣ ನೀಡಲು ವಿಶೇಷ ಕಾಳಜಿ ವಹಿಸಿ ಕ್ರಿಯಾ ಯೋಜನೆ ತಯಾರಿಸಿಕೊಂಡು ಗಂಭೀರವಾಗಿ ಪರಿಗಣಿಸಿ ಹಾಸನ ಜಿಲ್ಲೆಯನ್ನು ಮುಂದಿನ ಬಾರಿಯ ಫಲಿತಾಂಶದಲ್ಲಿ ರಾಜ್ಯದಲ್ಲಿ ಉತ್ತಮ ಸ್ಥಾನದಲ್ಲಿ ನೋಡಲು ಶ್ರಮ ವಹಿಸುವಂತೆ ಶಿಕ್ಷಕರಿಗೆ ತಿಳಿಸಿದರು.

(-4ನೇ ಪುಟಕ್ಕೆ)

> “ಇಂದಿನ ದಿನಗಳಲ್ಲಿ ಬಾಲ ಕಾರ್ಮಿಕ ಪದ್ಧತಿ ಸ್ವರೂಪ ಬದಲಾಗಿದ್ದು, ಬೃಹತ್ ನಗರ ಪ್ರದೇಶಗಳಲ್ಲಿ ಮಕ್ಕಳನ್ನು ಭಿಕ್ಷಾಟನೆಗೆ ಬಿಡುತ್ತಿದ್ದಾರೆ. ಸಾಮಾಜಿಕ ಪಿಡುಗುಗಳನ್ನು ತಡೆಯಲು ಮಕ್ಕಳ ಮೂಲಕ ಸಂದೇಶ ರವಾನೆಯಾದರೆ ಪರಿಣಾಮಕಾರಿಯಾಗಿ ತಡೆಗಟ್ಟಬಹುದು.
>
> *-ವಿ.ಚೈತ್ರ, ಜಿಲ್ಲಾಧಿಕಾರಿ*

ರಿಯಾಯಿತಿ ಬಸ್ ಪಾಸ್ ವಿತರಣೆ ಆರಂಭ

ಹಾಸನ : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 2017-18ನೇ ಸಾಲಿಗಾಗಿ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್‌ಗಳನ್ನು ವಿತರಿಸಲು ಕ್ರಮ ಕೈಗೊಂಡಿದ್ದು , ಎರಡನೇ ಹಂತವಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ಪಾಸ್‌ಗಳನ್ನು ಸಂಬಂಧಪಟ್ಟ ಶೈಕ್ಷಣಿಕ ಸಂಸ್ಥೆಗಳ ಮೂಲಕ ವಿತರಿಸಲಾಗುತ್ತಿದೆ.

ಸರ್ಕಾರದ ಆದೇಶದಂತೆ 2017-18ನೇ ಸಾಲಿನಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಲು ನಿಗಮವು ಕ್ರಮ ಕೈಗೊಂಡಿದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಉಚಿತ ಪಾಸು ಪಡೆಯಲು ಈಗಾಗಲೇ ಮುದ್ರಿಸಿರುವ ಅರ್ಜಿ ನಮೂನೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗ ಎಂದು ನಮೂದಿಸಲು ಅವಕಾಶವಿರುವ ಕಲಂಗಳಲ್ಲಿ ನಮೂದಿಸಬೇಕು. ಅದಕ್ಕೆ ಪೂರಕವಾಗಿ ಜಾತಿ ಪ್ರಮಾಣ ಪತ್ರದ ನಕಲನ್ನು ಅರ್ಜಿಯೊಂದಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಅರ್ಹ ಫಲಾನುಭವಿ ವಿದ್ಯಾರ್ಥಿಗಳು ಪಾಸಿನ ದರವನ್ನು ಪಾವತಿಸುವಂತಿಲ್ಲ. ಆದರೆ ನಿಯಮಾವಳಿಗಳನ್ವಯ ಸಂಸ್ಕರಣ ಶುಲ್ಕವಾಗಿ ರೂ.80 ಹಾಗೂ ಅಪಘಾತ ಪರಿಹಾರ ನಿಧಿ ಶುಲ್ಕವಾಗಿ 10 ತಿಂಗಳಿಗೆ ರೂ.50ರಂತೆ ಪಾವತಿಸಬೇಕು.

(-4ನೇ ಪುಟಕ್ಕೆ)

ಕೆಲಸ ಖಾಯಂಗೆ ಒತ್ತಾಯಿಸಿ ಪೌರ ಕಾರ್ಮಿಕರ ಪ್ರತಿಭಟನೆ



ಹಾಸನ: ಕೆಲಸ ಖಾಯಂ ಮಾಡುವಂತೆ ಆಗ್ರಹಿಸಿ ಹೊರ ಗುತ್ತಿಗೆ ಪೌರ ಕಾರ್ಮಿಕರು ತಮ್ಮ ಕೆಲಸ ಸ್ಥಗಿತಗೊಳಿಸುವುದರ ಮೂಲಕ ಸೋಮವಾರ ಜಿಲ್ಲಾಧಿಕಾರಿ ಕಛೇರಿ ಮುಂದೆ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ರಾಜ್ಯದ ಮುನಿಸಿಪಾಲಿಟಿಗಳಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದುಪಡಿಸಿ ಹೊರ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರನ್ನು ಖಾಯಂ ಮಾಡುವಂತೆ ಹಾಗೂ ಕಾರ್ಮಿಕರಿಗೆ ಮುನಿಸಿಪಾಲಿಟಿಗಳೇ ನೇರವಾಗಿ ವೇತನ ಪಾವತಿಸುವಂತೆ ಒತ್ತಾಯಿಸಿದರು.

ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯಿತಿಗಳಲ್ಲಿ ನಗರ ನೈರ್ಮಲ್ಯ, ಕುಡಿಯುವ ನೀರು ನಿರ್ವಹಣೆ ಸೇರಿದಂತೆ ಬಹುತೇಕ ನಾಗರಿಕ ಸೇವೆಗಳನ್ನು ಹೊರ ಗುತ್ತಿಗೆ ನೀಡುತ್ತಿದೆ. ಈ ಗುತ್ತಿಗೆ ಪಡೆದ ಗುತ್ತಿಗೆದಾರರು ಕಾರ್ಮಿಕರನ್ನು ಮತ್ತೆ ಹೊರ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಅವರಿಗೆ ಕಾನೂನುಬದ್ಧವಾದ ವೇತನ ಹಾಗೂ ಇನ್ನಿತರೆ ಸೇವಾ ಸೌಲಭ್ಯಗಳನ್ನು ನೀಡದೆ ವಂಚಿಸುತ್ತಿದ್ದಾರೆ ಎಂದು ದೂರಿದರು.

ಮುನಿಸಿಪಾಲಿಟಿಗಳಲ್ಲಿ ಅಧಿಕಾರದಲ್ಲಿರುವ ಚುನಾಯಿತ ಸಮಿತಿಯ ಅಧ್ಯಕ್ಷರು, ಸದಸ್ಯರು, ಮುನಿಸಿಪಾಲಿಟಿಗಳ ಆಯುಕ್ತರು, ಮುಖ್ಯಾಧಿಕಾರಿಗಳು, ಹೆಲ್ತ್ ಇನ್‌ಸ್ಪೆಕ್ಟರ್‌ಗಳು ಮತ್ತು ಇಂಜಿನಿಯರ್‌ಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ದಲಿತ ಹಾಗೂ ಬಡ ಪೌರ ಕಾರ್ಮಿಕರ ಮೇಲೆ ದಬ್ಬಾಳಿಕೆ, ದೌರ್ಜನ್ಯ ನಡೆಸುವ ಮುಖಾಂತರ ಕಾರ್ಮಿಕರನ್ನು ಇನ್ನಿಲ್ಲದಂತೆ ಶೋಷಿಸುತ್ತಿದ್ದಾರೆ ಎಂದು ದೂರಿದರು.

ಕಾರ್ಮಿಕರ ಸಂಘಟಿತ ಹೋರಾಟದ ಫಲವಾಗಿ ಗುತ್ತಿಗೆ ಪೌರ ಕಾರ್ಮಿಕರಿಗೆ ಕನಿಷ್ಠ ವೇತನದಲ್ಲಿ ಹೆಚ್ಚಳ ಮಾಡಲಾಗಿದೆ. ಅವರಿಗೆ ಭವಿಷ್ಯ ನಿಧಿ, ಇಎಸ್‌ಐ ಮುಂತಾದ ಸೇವಾ ಸೌಲಭ್ಯಗಳನ್ನೂ ನೀಡಲಾಗಿದೆ. ಆದರೆ ಮುನಿಸಿಪಾಲಿಟಿಗಳಲ್ಲಿನ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಗುತ್ತಿಗೆದಾರರು ಶಾಮೀಲಾಗಿ ಕಾರ್ಮಿಕರಿಗೆ ಸೌಲಭ್ಯಗಳು ಸಿಗದಂತೆ ವಂಚಿಸುತ್ತಿದ್ದಾರೆ ಎಂದು ಆರೋಪಿಸಿದರು.

(-4ನೇ ಪುಟಕ್ಕೆ)

4ನೇ ವರ್ಷದ ಪುಣ್ಯಸ್ಮರಣೆ



ಜನನ : 20-9-1956

ಮರಣ : 13-6-2013

ಕೆ.ಎಸ್. ಗಣೇಶ್

ಮಾಲೀಕರು, ಕ್ಲಾಸಿಕ್ ಸ್ಟುಡಿಯೋ, ಹಾಸನ.

ಇಂದಿಗೆ ನೀವು ನಮ್ಮನ್ನಗಲಿ 4 ವರ್ಷವಾಗಿದ್ದು
ಇಂದಿಗೂ ನಿಮ್ಮ ನೆನಪು ನಮಗೆ ಹಚ್ಚ ಹಸಿರಾಗಿದೆ.
ನಿಮ್ಮ ತತ್ವ-ಆದರ್ಶಗಳೇ ನಮಗೆ
ಇಂದಿಗೂ ಸ್ಫೂರ್ತಿಯ ಸೆಲೆ

ಪತ್ನಿ: **ಬೀನಾ ಗಣೇಶ್**
ಮಕ್ಕಳಾದ: **ಪ್ರಿಯಾಂಕ ಕೆ.ಜಿ., ಮೋನಿಕಾ ಕೆ.ಜಿ.**
ಕುಟುಂಬಸ್ಥರು, ಹಿತೈಷಿಗಳು
ಹಾಗೂ ಮಿತ್ರರು, ಹಾಸನ.

ಜೂ.14,15 ರಂದು ಕಾಫಿ ಕೃಷಿ ಮೇಳ

ಹಾಸನ: ಜಿಲ್ಲಾ ಪ್ಲಾಂಟರ್ಸ್ ಸಂಘದ ಸಂಯುಕ್ತಾಶ್ರಯದಲ್ಲಿ ಸಕಲೇಶಪುರದಲ್ಲಿರುವ ಶ್ರೀ ಗುರುವೇಗೌಡ ಕಲ್ಯಾಣ ಮಂಟಪದ ಆವರಣದಲ್ಲಿ ಜೂನ್ 14 ಮತ್ತು 15ರಂದು ಕಾಫಿ ಕೃಷಿ ಮೇಳದ ಉದ್ಘಾಟನೆ ಹಾಗೂ ವಾರ್ಷಿಕ ಮಹಾ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಸಂಘದ ಅಧ್ಯಕ್ಷ ಕೆ.ಬಿ.ಕೃಷ್ಣಪ್ಪ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಅವರು ಮಾತನಾಡಿ, ಬುಧವಾರ ಬೆಳಿಗ್ಗೆ 10-30ಕ್ಕೆ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಜೈರಾಂ ನೆರವೇರಿಸಲಿದ್ದಾರೆ. ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಪಿ.ಮೋಹನ್ ಇತರರು ಭಾಗವಹಿಸಲಿದ್ದಾರೆ. ನಂತರ ಎರಡನೇ ದಿನ ನಡೆಯುವ 25ನೇ ವಾರ್ಷಿಕ ಮಹಾ ಸಮ್ಮೇಳನವನ್ನು ಸಚಿವ ಎ.ಮಂಜು ಉದ್ಘಾಟಿಸುವರು. ಸಂಸದ ಎಚ್.ಡಿ.ದೇವೇಗೌಡ, ನೀರಾವರಿ ಸಚಿವ ಎಂ.ಬಿ.ಪಾಟೀಲ್, ಅರಣ್ಯ ಸಚಿವ ರಮಾನಾಥ ರೈ, ಸಕಲೇಶಪುರ ಕ್ಷೇತ್ರದ ಶಾಸಕ ಎಚ್.ಕೆ.ಕುಮಾರಸ್ವಾಮಿ, ಕಾಫಿ ಮಂಡಳಿ ಅಧ್ಯಕ್ಷ ಎಂ.ಎಸ್.ಬೋಜೇಗೌಡ ಸೇರಿದಂತೆ ಇತರೆ ಜನಪ್ರತಿನಿಧಿಗಳು ಭಾಗವಹಿಸುವರು ಎಂದು ವಿವರಿಸಿದರು.

ಈ ವೇಳೆ ಕಾಫಿ ಬೆಳೆ ವಿಚಾರವಾಗಿ ಕಾಫಿ ಬೆಳೆಗಾರರಿಗೆ ಅನೇಕ ವಿಷಯಗಳನ್ನು ತಿಳಿಸಲಾಗುವುದು ಮತ್ತು ಪರಿಸರ ರಕ್ಷಣೆ ಕುರಿತು ಜಾಗೃತಿ ಮೂಡಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪ್ಲಾಂಟರ್ಸ್ ಸಂಘದ ಗೌರವ ಕಾರ್ಯದರ್ಶಿ ಎಂ.ಹೆಚ್. ಪ್ರಕಾಶ್, ಟ್ರಸ್ಟ್ ಅಧ್ಯಕ್ಷ ಉದಯಕುಮಾರ್ ಇತರರು ಹಾಜರಿದ್ದರು.

ಜೂ.15ರಂದು ಜನಸಂಪರ್ಕ ಸಭೆ

ಹಾಸನ : ಹಾಸನ ವಿಭಾಗದ ಕೆ.ಐ.ಎ.ಡಿ.ಬಿ. ವಿಭಾಗ ವ್ಯಾಪ್ತಿಯ ಗ್ರಾಹಕರ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಜೂನ್ 15ರಂದು ನಗರದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಲ್ಲಿ, ಕಾರ್ಯ ಮತ್ತು ಪಾಲನಾ ವೃತ್ತದ ಅಧೀಕ್ಷಕ ಅಭಿಯಂತರರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ.

ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಕುಂದು ಕೊರತೆಗಳೇನಾದರೂ ಇದ್ದಲ್ಲಿ ಜನಸಂಪರ್ಕ ಸಭೆಯಲ್ಲಿ ಬಗೆಹರಿಸಿಕೊಳ್ಳಬೇಕೆಂದು ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯಪಾಲಕ ಅಭಿಯಂತರರು(ವಿ) ಕೋರಿದ್ದಾರೆ.

ಉತ್ತರಕ್ರಿಯಾರಾಧನೆಗೆ ಆಹ್ವಾನ

ಶ್ರೀ ಎಸ್. ದ್ಯಾವೇಗೌಡ
ಜನನ:06-10-1920 ನಿಧನ: 04-06-2017

ದುಃಖಭಾಗಿಗಳು:
ಮಕ್ಕಳು, ಅಳಿಯಂದಿರು,
ಮೊಮ್ಮಕ್ಕಳು,
ಯಲಿಯೂರು ಗ್ರಾಮಸ್ಥರು
ಹಾಗೂ ಬಂಧು-ಮಿತ್ರರು

ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ಯಲಿಯೂರು ಗ್ರಾಮದ **ಶ್ರೀ ಎಸ್. ಶಿವರಾಮು** *(ದಿ॥ ಶಿವನಂಜೇಗೌಡ ಉರುಫ್ ಪಟೇಲ್ ಮೊಗಣ್ಣಗೌಡರ ಮಗ)* ಮಾಡುವ ವಿಜ್ಞಾಪನೆಗಳು
ದಿ. 04-06-2017ನೇ ಭಾನುವಾರ ನನ್ನ ಅಣ್ಣನಾದ

ಶ್ರೀ ಎಸ್. ದ್ಯಾವೇಗೌಡ

(ಮಾಜಿ ನಗರಸಭಾ ಸದಸ್ಯರು) (ನಿವೃತ್ತ ಆರೋಗ್ಯ ಅಧಿಕಾರಿ, ನಗರಸಭೆ)
(ನಿವೃತ್ತ ನೌಕರರ ಸಂಘದ ಮಾಜಿ ಅಧ್ಯಕ್ಷರು) (ಮಾಜಿ ನಿರ್ದೇಶಕರು, ಜನತಾ ಬಜಾರ್, ಹಾಸನ)

ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾದ “**ಉತ್ತರ ಕ್ರಿಯಾದಿ**” ಯನ್ನು ದಿ.14-06-2017ನೇ ಬುಧವಾರ ಮಧ್ಯಾಹ್ನ 12-30 ಗಂಟೆಗೆ **ಶಂಕರಿಮಠ (ಭಾರತೀ ತೀರ್ಥ ಕೃಪಾ) ಕೆ.ಆರ್.ಪುರಂ, ಹಾಸನ** ಇಲ್ಲಿ ನಡೆಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಬಯಸಬೇಕಾಗಿ ಕೋರುತ್ತೇವೆ.

ಪುರುಷೋತ್ತಮ್‌ಗೌಡ , ಇಂಜಿನಿಯರ್
ಮೊ:9448056538

ತಮ್ಮ ವಿಶ್ವಾಸಿ
ಶ್ರೀ ಎಸ್. ಶಿವರಾಮು

ವಿ.ಸೂ. : ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕಾಗಿ ವಿನಂತಿ.

PIAGGIO
ದೇಶದ ಭರವಸೆಯ ನಂ.1, 3-ವ್ಹೀಲರ್
apé
ಈಗ ಪರಿಸರ ಸ್ನೇಹಿ BSIV ಮಾದರಿಯಲ್ಲಿ
ಹಿಂದೆಂದಿಗಿಂತಲೂ ಅಧಿಕ ಪಿಕ್‌ಅಪ್, ಮೈಲೇಜ್ ಮತ್ತು ದೀರ್ಘ ಬಾಳಿಕೆಯ ಕ್ಲಚ್‌ನೊಂದಿಗೆ ಲಭ್ಯ
ಅರ್ಹ ಗ್ರಾಹಕರಿಗೆ ರಾಷ್ಟ್ರೀಕೃತ
ಫಾರ್ಮ್ ಪವರ್
ಶ್ರೀ ಸಿದ್ದೇಶ್ವರ ಕಾಂಪ್ಲೆಕ್ಸ್, ತಣ್ಣೀರುಹಳ್ಳ, ಬಿ.ಎಂ.ರಸ್ತೆ, ಹಾಸನ-573201.
☎ : 08172 - 257235 / 257236, ಮೊ : 9242938668 / 9880306919